ಸ್ವಚ್ಛ ಸಂಕೀರ್ಣ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

# ಘನತ್ಯಾಜ್ಯ ನಿರ್ವಹಣೆಯ ಪ್ರಮಾಣಿತ ಕಾರ್ಯಾಚರಣೆಯ ವಿಧಾನ

## 1. ಘನ - ತ್ಯಾಜ್ಯ ನಿರ್ವಹಣಾ ಮೇಲುಸ್ತುವಾರಿ ಸಮಿತಿಯ ರಚನೆ.

ಗ್ರಾಮ ಪಂಚಾಯಿತಿಯಲ್ಲಿನ ಘನ -ತ್ಯಾಜ್ಯ ನಿರ್ವಹಣಾ ಚಟುವಟಿಕೆಗಳನ್ನು ಪರಿಶೀಲಿಸಲು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾ ಪಂ – ಅಧ್ಯಕ್ಷರು, ಸಂಜೀವಿನಿ ಒಕ್ಕೂಟದ (GPLF) ಅಧ್ಯಕ್ಷರು, ಸಮುದಾಯ ಸಂಪನ್ಮೂಲ ವ್ಯಕ್ತಿಗಳು (Master Bookkeepers (MBK's), Local Community Resource Persons (LCRP's) ), NRLM ಸಂಯೋಜಕರು, ಜಿಲ್ಲೆಯ SBM(G) ಸಂಯೋಜಕರು ಮತ್ತು VWSC ಸದಸ್ಯರನ್ನೊಳಗೊಂಡ ಮೇಲುಸ್ತುವಾರಿ ಸಮಿತಿಯನ್ನು ರಚಿಸುವುದು.



## 2. ಮೇಲುಸ್ತುವಾರಿ ಸಮಿತಿಯ ಕಾರ್ಯ ಚಟುವಟಿಕೆಗಳು(ಜವಾಬ್ದಾರಿ)



- ಪ್ರತಿ ತಿಂಗಳು ಕಡ್ಡಾಯವಾಗಿ ಸಭೆ ಸೇರಿ ಘನ-ತ್ಯಾಜ್ಯ ನಿರ್ವಹಣೆಯನ್ನು ಪರಿಶೀಲಿಸುವುದು.
- ಕಡ್ಡಾಯವಾಗಿ ಪ್ರತಿ ಮನೆಯಲ್ಲಿ ಮಾಹಿತಿ ಶಿಕ್ಷಣ ಸಂವಹನ (IEC) ಚಟುವಟಿಕೆಗಳ ಮೂಲಕ, ಮೂಲದಲ್ಲಿ ತ್ಯಾಜ್ಯಗಳ ವಿಂಗಡಣೆ ಮತ್ತು ನಿರ್ವಹಣೆ, ಸಂಗ್ರಹಣೆಯ ಬಗ್ಗೆ ಮಾಹಿತಿ ನೀಡುವುದು.(ಹಸಿ, ಒಣ ಮತ್ತು ಅಪಾಯಕಾರಿ ತ್ಯಾಜ್ಯ)
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರತಿದಿನ ಮನೆಗಳಿಂದ, ವಾಣಿಜ್ಯ ಮಳಿಗೆ, ಹೋಟೇಲ್, ಸಭಾ ಭವನಗಳು, ಮಾರುಕಟ್ಟೆ ಇತ್ಯಾದಿಗಳಿಂದ ಸೂಕ್ಮ ಯೋಜನೆ ಮತ್ತು ಮಾರ್ಗನಕ್ಷೆ ರೂಪಿಸುವುದು. ಉತ್ಪತ್ತಿಯಾಗುವ ಸಾವಯವ(ಹಸಿ) & ಒಣ ತ್ಯಾಜ್ಯಗಳ ಪ್ರಮಾಣದ ಬಗ್ಗೆ ವಿವರವಾದ ಮಾಹಿತಿಯನ್ನು ಸಂಗ್ರಹಿಸುವುದು.
- ಗ್ರಾಮವಾರು ಮಾರ್ಗ ನಕ್ಷೆಯನ್ನು ಗುರುತಿಸಿ ನಿಗದಿತ ಸಮಯ & ದಿನದಂದು. ತ್ಯಾಜ್ಯ ಸಂಗ್ರಹಣೆಗೆ ಮಾರ್ಗದರ್ಶನ ನೀಡುವುದು.
- ರಸ್ತೆ ಬದಯಲ್ಲಿ/ಖಾಲಿ ಜಾಗಗಳಲ್ಲಿ ಕಸ ಸುರಿದಿರುವ ಸ್ಥಳ/ ಪ್ರದೇಶವನ್ನು ಗುರುತಿಸಿ, ತೆರವುಗೊಳಿಸಿ, ಸ್ವಚ್ಛವಾಗಿಡುವುದು.








## 3. ಬಳಕೆದಾರರ ಶುಲ್ಕ ಮತ್ತು ದಂಡ:

- ಬಳಕೆದಾರರ ಶುಲ್ಕ ಹಾಗೂ ದಂಡ ವಿಧಿಸುವದಕ್ಕೆ ಸಂಬಂಧಿಸಿರುವಂತೆ ಸುತ್ತೋಲೆ ಸಂಖ್ಯೆ: ಕಪಂರಾಅ/ಅಭಿವೃದ್ಧಿ/308/2022, ದಿನಾಂಕ:18.07.2022 ರನ್ವಯ ಕ್ರಮವಹಿಸುವುದು.
- ಪ್ರಾರಂಭಿಕ ಹಂತದಲ್ಲಿ ಘನ-ತ್ಯಾಜ್ಯ ನಿರ್ವಹಣೆಗಾಗಿ ಗ್ರಾಮ ಪಂಚಾಯಿತಿಯು 15ನೇ ಹಣಕಾಸಿನ ನಿರ್ಬಂಧಿತ ಅನದಾನವನ್ನು ಬಳಸಿಕೊಳ್ಳುವುದು. ಬಳಕೆದಾರರ ಶುಲ್ಕ & ತ್ಯಾಜ್ಯ ನಿರ್ವಹಣೆ ಮತ್ತು ಮಾರಾಟದಿಂದ ಬರುವ ಆದಾಯದಿಂದ ಘನ-ತ್ಯಾಜ್ಯ ನಿರ್ವಹಣೆಯನ್ನು GPLF ಗಳು ಸ್ವಯಂಪೂರ್ಣವಾಗಿ ನಿರ್ವಹಿಸುವಂತಾಗಲು ಕ್ರಮವಹಿಸುವುದು.

## 4. ತರಬೇತಿ:

- GPLF ಸದಸ್ಯರಿಗೆ ಘನ-ತ್ಯಾಜ್ಯ ನಿರ್ವಹಣೆ ಬಗ್ಗೆ ವ್ಯವಸ್ಥಿತ ತರಬೇತಿಯನ್ನು ಸದಸ್ಯರಿಗೆ ನೀಡುವುದು, I.E.C. ಮೂಲಕ ಸಾರ್ವಜನಿಕರ ಮನವೊಲಿಕೆಯ ಬಗ್ಗೆ ತರಬೇತಿಯನ್ನು ನೀಡುವುದು.
- ವಾಹನ ಚಾಲಕರ ತರಬೇತಿ - ವಿಶೇಷವಾಗಿ ಮಹಿಳೆಯರಿಗೆ ವಾಹನಾ ಚಾಲನಾ ತರಬೇತಿಯನ್ನು ನೀಡಲು ಕ್ರಮವಹಿಸುವುದು. ವಾಹನ ಚಾಲನೆ ತರಬೇತಿ ಪಡೆದು ಕೆಲಸ ನಿರ್ವಹಿಸುವವರಿಗೆ ಕೆಲವು ನಿಬಂಧನೆಗಳನ್ನು ವಿಧಿಸುವುದು.

1. ಕನಿಷ್ಠ 01 ವರ್ಷ ಸೇವೆ ಸಲ್ಲಿಸುವುದು.
2. ಅನಿವಾರ್ಯ ಕಾರಣಗಳಿಂದ ಬಿಟ್ಟು ಹೋಗಬೇಕಾದ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಗೆ 03 ತಿಂಗಳು ಮುಂಚಿತವಾಗಿ ನೋಟಸ್ ನೀಡತಕ್ಕದ್ದು.




## 5. ಒಡಂಬಡಿಕೆ:

- ಸುತ್ತೋಲೆ ಸಂಖ್ಯೆ:ಕಪಂರಾಅ/ಅಭಿವೃದ್ಧಿ/308/2022 ದಿನಾಂಕ:18.07.2022 ರನ್ವಯ ಕ್ರಮವಹಿಸುವದು.
- ಗೌರವಧನಕ್ಕೆ ಸಂಬಂಧಿಸಿದಂತೆ ಸುತ್ತೋಲೆಯಲ್ಲಿ ನಮೂದಿಸಿದ ಗೌರವಧನದ ಜೊತೆಗೆ 06 ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಸುವುದು, ESI/PF ಸೌಲಭ್ಯ ನೀಡಲು ಕ್ರಮವಹಿಸುವುದು.

## 6. ಸಮುದಾಯದ ಪಾಲ್ಗೊಳ್ಳುವಿಕೆ:

- "ನಮ್ಮ ಗ್ರಾಮ ಸ್ವಚ್ಛ ಗ್ರಾಮ" ತತ್ವದಡಿಯಲ್ಲಿ ಗ್ರಾಮ ಪಂಚಾಯಿತಿಯ ಎಲ್ಲಾ ಮನೆ, ವಾಣಿಜ್ಯ ಮಳಿಗೆ, ಹೋಟೇಲ್ ಮಾರುಕಟ್ಟೆ, ಸಭಾ ಭವನ ಇತ್ಯಾದಿಗಳಿಂದ ತ್ಯಾಜ್ಯವನ್ನು ಸಂಗ್ರಹಿಸಲು ಮತ್ತು ಸ್ವಚ್ಛವಾಗಿಡಲು ಜನರ ಸಹಭಾಗಿತ್ವವನ್ನು ಹೆಚ್ಚಿಸುವುದು.
- ಒಣ ತ್ಯಾಜ್ಯ ಮಾತ್ರ ಸಂಗ್ರಹಣೆಯ ಸಂದರ್ಭದಲ್ಲಿ ವಾರಕ್ಕೆ ಕನಿಷ್ಠ ಎರಡು ಬಾರಿ ಅಥವಾ ಮೂರು ದಿನಕ್ಕೊಮ್ಮೆ ಒಣ ಕಸವನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕ್ರಮವಹಿಸುವುದು.







## 7. ಎರಡನೇ ಹಂತದ ತ್ಯಾಜ್ಯ ವಿಂಗಡಣೆ:

- ಹಸಿ ಕಸ( ಸಾವಯವ ಕಸ) ಸಂಗ್ರಹಣೆ ಸಂರ್ಭದಲ್ಲಿ ಪ್ರತಿದಿನ ಹಸಿಕಸವನ್ನು ಸಂಗ್ರಹಿಸಿ ಅದೇ ದಿನ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕ್ರಮ ವಹಿಸುವುದು
- ಹಸಿ & ಒಣ ತ್ಯಾಜ್ಯವನ್ನು ಸಂಗ್ರಹಿಸಿದ ನಂತರ ಎರಡನೇ ಹಂತದ ವಿಂಗಡಣೆ (Secondary Segregation/Sorting) ಅವಶ್ಯಕವಾಗಿರುತ್ತದೆ.
- ಹಸಿ ತ್ಯಾಜ್ಯವನ್ನು ಸಂಗ್ರಹಿಸಿ ಗೊಬ್ಬರವಾಗಿ ಪರಿವರ್ತಿಸುವ ಪೂರ್ವದಲ್ಲಿ ಅದಲ್ಲಿರುವ ಸಾವಯವ ಅಲ್ಲದ ತ್ಯಾಜ್ಯವನ್ನು ಬೇರ್ಪಡಿಸಿ ನಿರ್ವಹಿಸುವುದು.
- ಒಣ ತ್ಯಾಜ್ಯವನ್ನು ಸಂಗ್ರಹಿಸಿದ ನಂತರ ಖರೀದಿದಾರರ ಬೇಡಿಕೆಗೆ ಅನುಗುಣವಾಗಿ ವಿಂಗಡಿಸಿ ಮಾರಾಟ ಮಾಡಲು ಕ್ರಮವಹಿಸವುದು.
- ಅಪಾಯಕಾರಿ ತ್ಯಾಜ್ಯವನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ನಿರ್ವಹಣೆ ಮಾಡುವುದು ,ನಿಮ್ಮ ಹಂತದಲ್ಲಿಯೇ ಇಂತ ತ್ಯಾಜ್ಯವನ್ನು ನಿರ್ವಹಣೆ ಮಾಡಲು ಸಾಧ್ಯವಾಗದಿದ್ದ ಪಕ್ಷದಲ್ಲಿ MRF/Land Fills ಘಟಕಕ್ಕೆ ಹಸ್ತಾಂತರಿಸುವುದು.





## 8. ಖರೀದಿದಾರರ ಗುರುತಿಸುವಿಕೆ:



- ಸಾವಯವ ತ್ಯಾಜ್ಯದಿಂದ ಉತ್ಪತಿಯಾದ ಗೊಬ್ಬರವನ್ನು ಸ್ಥಳೀಯ ಗ್ರಾಹಕರಿಗೆ ಅಗತ್ಯಕ್ಕೆ ತಕ್ಕಂತೆ ಹರಾಜಿನ ಮೂಲಕ ಮಾರಾಟ ಮಾಡುವುದು.
- ಒಣ ತ್ಯಾಜ್ಯಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಒಣ ತ್ಯಾಜ್ಯಗಳನ್ನು ಪಟ್ಟಿ ಮಾಡಿ ಖರೀದಿದಾರರಿಂದ ದರಪಟ್ಟಿಯನ್ನು ಕರೆದು ಅತಿ ಹೆಚ್ಚು ದರ ನಮೂದಿಸಿದ ಖರೀದಿದಾರನಿಗೆ ನೀಡುವುದು. ಒಂದು ವೇಳೆ ಒಂದಕ್ಕಿಂತ ಹೆಚ್ಚು ಖರೀದಿದಾರರು ತ್ಯಾಜ್ಯವನ್ನು ಖರೀದಿಸಲು ಆಸಕ್ತಿ ತೋರದಿದ್ದಲ್ಲಿ ತಾಲ್ಲೂಕಿನ ಖರೀದಿದಾರರಿಗೆ ಮಾರಾಟ ಮಾಡುವುದು.

## 9. ಹಸಿ ತ್ಯಾಜ್ಯ ನಿರ್ವಹಣೆಯಲ್ಲಿ ಉತ್ತಮ ವಿಲೇವಾರಿ ವಿಧಾನಗಳು:

1. ಒಣ ಎಲೆ ಗೊಬ್ಬರ ವಿಧಾನ
2. ಹಸಿ ಮಾಂಸ ತ್ಯಾಜ್ಯ ನಿರ್ವಹಣೆ-Pot Method(Gunaba Jalam)
3. ವರ್ಮಿ ಕಾಂಪೋಸ್ಟ್
4. ನಿಂಬೆ ಜಾತಿಯ ಹಣ್ಣುಗಳ ಸಿಪ್ಪೆಗಳ ನಿರ್ವಹಣೆ
5. ಕಿಚನ್ ಗಾರ್ಡನ್
6. ಸ್ಯಾನಿಟರಿ ಪ್ಯಾಡ್ ಮತ್ತು ಡೈಪರ್ ನಿರ್ವಹಣೆ
7. ಪೌಲ್ಟ್ರಿ ತ್ಯಾಜ್ಯ ನಿರ್ವಹಣೆ (Feather & Skin)















